ಅದಾಗಲೇ ಎಸ್ಕವೇಷನ್‌ಗೆ ಬೇಕಾದ ಹಾರೆ, ಗುದ್ದಲಿ, ಪಿಕಾಸೆಗಳೆಲ್ಲಾ ಅಂಗಳದಲ್ಲಿ ಬಂದು ಬಿದ್ದಾಗಿದೆ. ಉತ್ಖನನ ನಡೆಸುವವರು ಭೂಮಿಯನ್ನು ಕೊರೆದು ನೆಲದಡಿಯ ಮಣ್ಣು ಕೆದಕಿ ಚರಿತ್ರೆಯ ತುಣುಕುಗಳನ್ನು ಆಯ್ದು ಗತಿಸಿದ ಕಾಲವನ್ನು ಪುನರ್‌ಸೃಷ್ಟಿಸಿಕೊಂಡು ಅವಾಹಿಸಿಕೊಳ್ಳುವಂತೆ, ತಾನೂ ತನ್ನ ಮಿದುಳಿನ ಒಂದು ಭಾಗವನ್ನು ಚೊಕ್ಕಟಗೊಳಿಸಬೇಕಿದೆ. ಆಮೇಲೆ ಬುಲ್ಡೋಸರ್ ಓಡಿಸಿ, ನಿನ್ನೆಗಳನ್ನೆಲ್ಲಾ ಜಾಲಾಡಿ ಹಳತನ್ನೆಲ್ಲಾ ಕಲೆ ಹಾಕಿ ಒಟ್ಟಾರೆಯಾಗಿ ಮೊಗೆದು ಒಂದು ವರುಷದ ಹಿಂದಿನ ಘಟನೆಗಳನ್ನೆಲ್ಲಾ ಪದರ ಪದರವಾಗಿ ಜೋಡಿಸಿ, ಅರ್ಥಗಳನ್ನು ಶೋಧಿಸಬೇಕಿದೆ. ಬೇಡ ಬೇಡವೆಂದರೂ ಹಳೆಹೆಜ್ಜೆ ಜಾಡನ್ನು ಅನುಸರಿಸಿ, ಯಾವುದೋ ಪೂರ್ವ ಓಣಿಯೊಳಗೆ ತೂರಿಸಿ, ಪಾತಾಳದಾಳದ ವರೆಗೂ ತನ್ನನ್ನುರುಳಿಸಿ ಈ ಮೂರು ದಿನಗಳನ್ನು ತನ್ನಿಂದ ಕಸಿದುಕೊಳ್ಳುತ್ತಿರುವ ಗತಗಾಲದ ನೆನಪುಗಳಾದರೂ ಯಾವುದಪ್ಪಾ?

ಹೌದು! ಚಂದವಿದ್ದಳು; ತೆಳ್ಳಗೆ, ಬೆಳ್ಳಗೆ, ಉದ್ದಕೆ! ಕೂದಲೂ ನುಣುಪಾಗಿತ್ತು, ಕೈಯಿಟ್ಟರೆ ಜಾರುವ ಹಾಗೆ! ಜಾರುಬಂಡೆಯಲ್ಲಿ ಜಾರುವ ಹಾಗೆ ಎರಡೂ ಕೈಗಳನ್ನಿಟ್ಟು ಬಹುಶಃ ಜಾರಿದೆ ಅನ್ನಿಸುತ್ತೆ. ಯಾವುದೋ ಸೆಂಟ್ ಲೇಪಿಸಿಕೊಂಡಿದ್ದಳು. ಹಿತವಾದ ಪರಿಮಳ. ಅದೂ ಚಂದವಿತ್ತು.

